**O.S. 473-24 DW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 06.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಪರ ಶ್ರೀ C B G ವಕೀಲರಿಂದಃ**

3. ನನಗೆ ಓದಲು - ಬರೆಯಲು ಬರುವುದಿಲ್ಲ ಅಂದರೆ ಸರಿಯಲ್ಲ. ನಾನೇ ಮುಖ್ಯ ವಿಚಾರಣೆಗೆ ಮಾಹಿತಿ ಹೇಳಿ ಬರೆಸಿದ್ದೇನೆ. ದಾವಾ ಆಸ್ತಿಗಳು ನನ್ನ ಗಂಡನ ತಂದೆ ಆಸ್ತಿ ಅಂದರೆ ಸರಿ. ವಾದಿ ನನ್ನ ಗಂಡ ತಾಯಿ ಅಂದರೆ ಸರಿ. ನನ್ನ ಅತ್ತೆ ಬಿಟ್ಟು ವಾರಸಾ ಮಾಡಿಕೊಂಡಿದ್ದೇನೆ ಅಂದರೆ ಸರಿಯಲ್ಲ. ಕರೆದಿದ್ದೇವೆ ಆದರೆ ಬಂದಿಲ್ಲ. ವಾರಸಾ ದಾಖಲೆಯನ್ನು ಎಲ್ಲಾ ವಾರಸುದಾರರನ್ನು ಸೇರಿಸಿ ಪಡೆಯಬೇಕಾಗುತ್ತದೆ ಅಂದರೆ, ನಾವು ಕರೆದಿದ್ದೇವೆ,ಚಿ ತಪ್ಪು ತಿಳಿದುಕೊಂಡು ಬಂದಿಲ್ಲ. ನಮ್ಮ ಅತ್ತೆ ಬರಲಾರದ ಕಾರಣ ಅವರ ಹೆಸರನ್ನು ಸೇರಿಸಿಲ್ಲ. ನನ್ನ ಹಾಗೂ ನನ್ನ ಅತ್ತೆ ನಡುವೆ ವಾಟ್ನಿಯಾಗಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿ ಕ್ರಮ ಸಂಖ್ಯೆ - 2 ನ್ನು ಪಿತ್ರಾರ್ಜಿತ ಆಸ್ತಿ ಮಾರಾಟ ಮಾಡಿ ಖರೀದಿ ಮಾಡಲಾಗಿದೆ ಅಂದರೆ ಸರಿಯಲ್ಲ. ನನ್ನ ಗಂಡ ರೈತಾಪಿ ಕೆಲಸ ಮಾಡುತ್ತಿದ್ದನು. ಹಾಗೂ ಹೊರಗಡೆ ಭೂಮಿಯಿಂದ ಆದಾಯ ಪಡೆದು ಭೂಮಿ ಖರೀದಿ ಮಾಡಿದ್ದಾನೆ. ರೈತಾಪಿ ಆದಾಯ ಬಿಟ್ಟು ನನ್ನ ಗಂಡನಿಗೆ ಬೇರೆ ಆದಾಯ ಇರಲಿಲ್ಲ. ಬ್ಲಾಕ ನಂಃ 144 ನ್ನು 2008 ರಲ್ಲಿ ಮಾರಾಟ ಮಾಡಲಾಗಿತ್ತು ಅಂದರೆ ಸರಿ. ಸದರಿ ಹಣದಿಂದ ದಾವಾ ಆಸ್ತಿ ಕ್ರಮ ಸಂಖ್ಯೆ - 2 ನ್ನು ಖರೀದಿ ಮಾಡಿದ್ದಾರೆ ಅಂದರೆ ಸರಿಯಲ್ಲ. ನನ್ನ ಗಂಡ ಯಾರ ಜಮೀನು ಎಷ್ಟು ಕ್ಷೇತ್ರ ಸಾಗುವಳಿ ಮಾಡುತ್ತಿದ್ದರೆಂದು ಹೇಳಲಾಗುವುದಿಲ್ಲ. ನನ್ನ ಗಂಡ ಯಾವುದೇ ಭೂಮಿ ಸಾಗುವಳಿ ಮಾಡಿಲ್ಲ, ಆ ಕಾರಣದಿಂದ ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ಅತ್ತೆ ಗೆ ಆಸ್ತಿ ಕೊಡಬಾರದೆಂದು ಅವರನ್ನು ಬಿಟು್ಟ ವಾರಸಾ ಮಾಡಿದ್ದೇವೆ ಅಂದರೆ ಸರಿಯಲ್ಲ. 5 ಲಕ್ಷ ರೂ. ಹಣ ಕೊಟ್ಟ ಬಗ್ಗೆ ದಾಖಲೆ ಹಾಜರಪಡಿಸುತ್ತೇನೆ. ನಾನು 5 ಲಕ್ಷ ರೂ. ಹಣ ಕೊಟ್ಟಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗೆ ಹಕ್ಕು ಇದೆ ಅಂದರೆ ಸರಿಯಲ್ಲ. ವಾದಿಗೆ ಆಸ್ತಿ ಕೊಡಬಾರದೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವೆ ಸಲ್ಲಿಸಿದ ನಂತರ 5 ಲಕ್ಷ ರೂ. ಕೊಟ್ಟಿದೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**O.S. 473-24** **DW-1**

**ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ಶ್ರೀ ಜಿ ಎನ್ ಬಿ, ವಕೀಲರಿಂದಃ**

5 ನೇ ಪ್ರತಿವಾದಿ ನನ್ನ ಗಂಡನ ಅಕ್ಕ. ನಮ್ಮ ಹಾಗೂ 5 ನೇ ಪ್ರತಿವಾದಿ ನಡುವೆ ವಾಟ್ನಿಯಾಗಿದೆ, ವಾಟ್ನಿ ಪತ್ರ ಹಾಜರಪಡಿಸಿಲ್ಲ. ಆ ರೀತಿ ವಾಟ್ನಿಯಾಗಿಲ್ಲ, ಆ ಕಾರಣದಿಂದ ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಗಳು ವಾರಸಾ ಪ್ರಕಾರ ಬಂದಿವೆ ಅಂದರೆ ಸರಿ. ಮನೆ ಈಗಲೂ ಜಂಟಿಯಾಗಿದೆ ಅಂದರೆ ಸರಿ. ನನ್ನ ಗಂಡನ ತಂದೆಯ ಅಣ್ಣ - ತಮ್ಮಂದಿರು ಆಪಸಾತದಲ್ಲಿ ವಾಟ್ನಿ ಮಾಡಿಕೊಂಡಿದ್ದಾರೆ ಅಂದರೆ ಸರಿ. ಆ ಪ್ರಕಾರ ಅವರವರ ಆಸ್ತಿಗಳಲ್ಲಿ ಅವರವರು ಇದ್ದಾರೆ ಅಂದರೆ ಸರಿ. ನಾವು ಮನೆ ಕಟ್ಟಿಕೊಂಡ ಜಾಗ ದಾವಾ ಕ್ರಮ ಸಂಖ್ಯೆ - 3 ನನ್ನ ಗಂಡನ ತಂದೆಗೆ ಬಂದಿದೆ ಅಂದರೆ ಸರಿ. ಸಂಗಪ್ಪ ಮರಣ ಹೊಂದಿದ ನಂತರ ವಾಟ್ನಿಯಾಗಿಲ್ಲ ಅಂದರೆ ಸರಿ. ದಾವಾ ಆಸ್ತಿ ಕ್ರಮ ಸಂಖ್ಯೆ- 3 ಇದು ಜಂಟಿ ಮಾಲಿಕರು ಅಂದರೆ ಸರಿ. ದಾವಾ ಆಸ್ತಿ ಹಿರಿಯರ ಆಸ್ತಿ ಇರುವುದರಿಂದ 5 ನೇ ಪ್ರತಿವಾದಿಗೆ ಹಕ್ಕು ಇದೆ ಅಂದರೆ ಸರಿಯಲ್ಲ. 5 ನೇ ಪ್ರತಿವಾದಿಗೆ ಹಣ ಕೊಟ್ಟಿದ್ದೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 10 ಸಾವಿರ ನಜರಚೂಕಿಯಿಂದ ತಪ್ಪಾಗಿದೆ, ಅದು 10 ಲಕ್ಷ ರೂ. ಗಳು ಇದೆ. 10 ಲಕ್ಷ ರೂ. ದಾಖಲೆ ಮಾಡಿಸುತ್ತೇವೆಂದು ಮಾಡಿಕೊಡಲಿಲ್ಲ. 10 ಲಕ್ಷ ರೂ. ಗಳ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. 10 ಲಕ್ಷ ರೂ. ಕೊಡದಿದ್ದರೂ ಸಹ ಕೊಟ್ಟಿದ್ದೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಹಕ್ಕು ಬಿಟ್ಟು ಪತ್ರ ಬರೆದುಕೊಟ್ಟಿದ್ದಾರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.